## ವಾರ್ತಾ ನಿಧಿ

ಸಂಘದ ಸದಸ್ಯರ ನಡುವೆ ಮುಖ್ಯಸಂಪರ್ಕ ಸೇತುವೆಯಾಗಿರುವ ಸಂಘದ ಚಟುವಟಿಕೆಗಳ ಮುಖವಾಣಿಯಾಗಿರುವ ಬಾಂಧವರ ಪ್ರತಿಭೆಗಳಿಗೆ ಒಂದು ಕನ್ನಡಿಯಂತಿರುವ ನಿಮ್ಮ 'ಸಂಕೇತಿ ವಾರ್ತಾ'ವನ್ನು ಸದೃಢಗೊಳಿಸಿ, ಗಟ್ಟಿಯಾಗಿ ತನ್ನ ಕಾಲಮೇಲೆ ನಿಲ್ಲುವಂತೆ ಮಾಡುವ ಹೊಣೆ ನಮ್ಮ-ನಿಮ್ಮೆಲ್ಲರ ಮೇಲಿದೆ. ಈ ನಿಟ್ಟಿನಲ್ಲಿ ಬಾಂಧವರಿಂದ ಉದಾರ ಕೊಡುಗೆಗಳನ್ನು ನಿರೀಕ್ಷಿಸಲಾಗಿದೆ. ಮಾನ್ಯ ಬಾಂಧವರು ತಮ್ಮ ಉದಾರ ಮನಸ್ಸಿನ ಕೊಡುಗೆಗಳನ್ನು ಅಧಿಕ ಸಂಖ್ಯೆಯಲ್ಲಿ ನೀಡಿ ಈ ಔಚಿತ್ಯಪೂರ್ಣ ಕಾರ್ಯದಲ್ಲಿ ಭಾಗಿಗಳಾಗಬೇಕೆಂದು ಕೋರುತ್ತೇವೆ. ಎರಡು ಪ್ರಕಾರದ ದಾನಿಗಳನ್ನು ಗುರುತಿಸಲಾಗುವುದು.

**ರೂ. 5,000/- ಕೊಡುಗೆ ನೀಡುವವರು**
**ಮಹಾಪೋಷಕರು**

**ರೂ. 1,000/- ಕೊಡುಗೆ ನೀಡುವವರು**
**ಪೋಷಕರು**

ದಾನಿಗಳ ಹೆಸರುಗಳನ್ನು ಪ್ರತಿ ತಿಂಗಳೂ 'ವಾರ್ತಾ'ದಲ್ಲಿ ಪ್ರಕಟಿಸಲಾಗುವುದು.

ಸಂಕೇತಿ ವಾರ್ತಾ
ಬೆಟ್ಟದಪುರ ಸಂಕೇತಿ ಸಂಘದ ಮಾಸಪತ್ರಿಕೆ
ಶ್ರೀ ಸರ್ವಧಾರಿ ಸಂ॥ ಶ್ರಾವಣ ಮಾಸ ಸಂಪುಟ - ೨೩
ಆಗಸ್ಟ್ ೨೦೦೮ ಸಂಚಿಕೆ - ೦೮

# True devotion

One of the notable features of Indian spiritual tradition is the Bhakti movement. This was in a sense, a real revolution in the socio-religious sphere, highlighting as it did, the essence of true devotion, shorn of all appendages of caste, creed, gender, occupation, wealth etc. The Bhakti philosophers looked upon man as a reflection of the Universal Spirit and the body as a mere vehicle to house the soul and carry on its preordained activities as a result of its actions in previous births. Whether it is Meerabai in the north, Sant Tukaram or Sant Namdev in Central India, the Alwars and Nayanmars in the south, the language may be different, but the refrain is the same. That of simple and true devotion, in a language that appealed and appeals to the commoner as well as the learned.

The Haridasas of Karnataka belong to this group of wandering ministrels and bards, who, through their lives of complete surrender to the lord demonstrated the hollowness of man's preoccupations with the trivial and instead exhorted him to embark upon the path towards realizing the goal of existence.

This does not mean that they wanted people to run away from their responsibilities and lead a life of laziness and hypocrisy. On the other hand, they emphasized the importance of doing one's duty, irrespective of the results and to engage

themselves in productive work, instead of resorting to dry debates.

Literally meaning "servants of God", the list of Haridasas includes great names like Purandaradasa, Kanakadasa, Gopaladasa, Vijayadasa, Vyasaraja, Vadiraja and many others, including ladies like Harapanahalli Bheemavva.

Dedicating themselves to a life of service through attempting to change man's way of behaviour and living, they adopted a practical approach to life. The medium of communication they chose to convey their thoughts was poetry and music. Without resorting to high sounding words or profound metaphysics, but at the same time concealing the very essence of all the religious treatises, they adopted the language of the masses to drive home their points.

Abstaining from gossip and slander, not coveting others possessions, hard work, belief in the efficacy of prayer and worship, not giving in to greed and anger, curtailing one's wants, realization that "humanity" is the only religion form the bedrock of their teachings. This would suffice to counter the accusation that religion and philosophy are a means of escapism from life's realities.

The compositions of these Bhakti saints constitute a vital part of literature and Indian Music and continue to be sung by musicians of all generation. When set to music, the glorious words with their enlightening and elevating meanings create an atmosphere of divinity suffused with melody.







# ಅಧ್ಯಕ್ಷನುಡಿ

ಪಿಂಚಣಿದಾರರ ಸ್ವರ್ಗ ಎಂಬ ಹೆಸರು ಬೆಂಗಳೂರಿಗೆ ಬಹಳ ಹಿಂದೆ ಇದ್ದಿರಬಹುದು. ಆದರೆ ಬೆಂಗಳೂರು ಅವಕಾಶಗಳ ಹೆಬ್ಬಾಗಿಲು ಆಗಿರುವುದರ ಜತೆಯಲ್ಲಿಯೇ ಆತಂಕಗಳಿಗೂ ಎಡೆ ಮಾಡಿಕೊಟ್ಟಿರುವುದು ಹೊಸ ಸುದ್ದಿಯಲ್ಲ. ಪೆನ್ಷನ್‌ದಾರರಿಗೆ ಟೆನ್ಷನ್ ಕೊಡುವ ದುಷ್ಕರ್ಮಿಗಳು ನಗರದಲ್ಲಿ ಹೆಚ್ಚಾಗುತ್ತಿದ್ದಾರೆ. ದುಷ್ಕರ್ಮಿಗಳ ಹಲ್ಲೆ-ದರೋಡೆಗೆ ಇತ್ತೀಚೆಗೆ ಗುರಿಯಾದವರು ಬಾಂಧವರಾದ ಆರ್. ಜಿ. ಸುಬ್ರಹ್ಮಣ್ಯ ಮತ್ತು ಮನೆಯವರು. ಎಂಭತ್ತು ವರ್ಷದ ಶ್ರೀಯುತರು, ಅವರ ಶ್ರೀಮತಿಯವರು ಮತ್ತು ಮಗಳು ಇರುವ ಜೆ. ಪಿ. ನಗರದ ಜನನಿಬಿಡ ಪ್ರದೇಶದ ಮನೆಗೆ ನಡುರಾತ್ರಿ ನುಗ್ಗಿದ ದುಷ್ಕರ್ಮಿಗಳು ನಗ-ನಗದು ಲೂಟಿ ಮಾಡಿ ಮೂವರಿಗೂ ದೈಹಿಕವಾಗಿ ಹಿಂಸೆ ಮಾಡಿ ಪರಾರಿಯಾಗಿದ್ದಾರೆ. ಈ ವಿಷಾದನೀಯ ಘಟನೆಯನ್ನು ಶ್ರೀ ಆರ್. ಜಿ. ಅವರೇ ಈ ಸಂಚಿಕೆಯಲ್ಲಿ ಹೃದಯಸ್ಪರ್ಶಿಯಾಗಿ ವಿವರಿಸಿದ್ದಾರೆ. ಇಂತಹ ಸಂದರ್ಭದಲ್ಲಿಯೂ ಅವರ ಶ್ರೀಮತಿಯವರು ತೋರಿದ ಸಮಯಪ್ರಜ್ಞೆ ಮತ್ತು ಧೈರ್ಯ, ಜನರ ಅನುಕಂಪಗಳನ್ನೂ ಸ್ಮರಿಸುವ ಶ್ರೀಯುತರು ಮತ್ತು ಮನೆಯವರಿಗೆ ಸಂಘದ ಪರವಾಗಿ ಸಾಂತ್ವನ ಹೇಳುತ್ತಲೇ ನಮ್ಮೆಲ್ಲರಿಗೂ ಎಚ್ಚರಿಕೆ ಗಂಟೆಯೂ ಆಗಿದೆಯೆಂಬುದನ್ನು ಮರೆಯದಿರೋಣ.

ಸಾಲರೂಪದ ವಿದ್ಯಾರ್ಥಿವೇತನ ಪಡೆದು ನೌಕರಿ ಸಿಕ್ಕಬಳಿಕ ಸಾಲ ವಾಪಸಾತಿ ಮಾಡುವ ಸ್ವಾಗತಾರ್ಹ ಪದ್ಧತಿಗೆ ಶ್ರೀಮತಿ ಪೂಜಾ ಮಹೇಶ್ ಅವರೂ ಬೆಂಬಲವಾಗಿದ್ದಾರೆ ಎಂದು ಹೇಳುತ್ತಾ ರೂ. 12,000/- ಮೊತ್ತವನ್ನೂ ಹಿಂತಿರುಗಿಸಿ ಮದುವೆಯ ಹೊಸ್ತಿಲಲ್ಲಿರುವ ಪೂಜಾ ಅವರಿಗೆ ಶುಭ ಹಾರೈಕೆಗಳನ್ನು ನೀಡುತ್ತಿದ್ದೇವೆ.

ವೃದ್ಧಾಶ್ರಮದ ನಿರ್ಮಾಣದ ಪ್ರಗತಿಯ ಜತೆಯಲ್ಲಿಯೇ ಮೇಲ್ವಿಚಾರಕರ ನೇಮಕಾತಿಯ ಬಗ್ಗೆಯೂ ಪ್ರಸ್ತಾವನೆ ಮಾಡಿದ್ದೆವಷ್ಟೆ. ಅದಕ್ಕೆ ಉತ್ತಮ ಪ್ರತಿಕ್ರಿಯೆ ಬರುತ್ತಿದೆ ಎಂದು ತಿಳಿಸಲು ಸಂತೋಷವೆನಿಸುತ್ತದೆ. ಮೂವರು ವ್ಯಕ್ತಿಗಳು ಆನಂದದಿಂದ ಈ ಜವಾಬ್ದಾರಿಯನ್ನು ಹೊರಲು ತಮ್ಮ ಇಂಗಿತವನ್ನು ವ್ಯಕ್ತಪಡಿಸಿರುತ್ತಾರೆ. ಅವರಿಗೆಲ್ಲ ವಂದನೆಗಳನ್ನು ಸಲ್ಲಿಸುತ್ತ, ಶೀಘ್ರದಲ್ಲಿಯೇ ಅವರನ್ನು ಸಂಘವು ಸಂಪರ್ಕಿಸುತ್ತದೆ ಎಂದು ತಿಳಿಸಲು ಇಚ್ಛಿಸುತ್ತೇನೆ.

**ಈಗಂತೂ ಐಟಿ ಬಿಟಿ ಯುಗ. ನಮ್ಮಲ್ಲಿಯೂ ಯುವ ಸಾಫ್ಟ್‌ವೇರ್ ಪರಿಣತರು ಸಾಕಷ್ಟಿದ್ದಾರೆ. ಆದಾಯಕ್ಕೇನೂ ಕೊರತೆಯಿಲ್ಲ ಎನ್ನಬಹುದಾದ ಅವರಿಂದ ಸಂಘದ ವಿದ್ಯಾರ್ಥಿ ವೇತನ ನಿಧಿಯು ಬಲಗೊಂಡರೆ ಅರ್ಥ ಪೂರ್ಣವಾಗುತ್ತದಲ್ಲವೆ ? ದಯವಿಟ್ಟು ಯುವ ಉದ್ಯೋಗಿಗಳು ಉದಾರವಾಗಿ ಸಂಘದ ಈ ನಿಧಿಗೆ ಕೊಡುಗೆ ನೀಡಿ ಸಂಘದ ಶಕ್ತಿಯನ್ನು ವರ್ಧಿಸಬೇಕೆಂದು ಕೋರುತ್ತೇನೆ.**

– ಎಂ. ನರಸಿಂಹನ್

## ವೃದ್ಧಾಶ್ರಮಕ್ಕೆ ಸೂಕ್ತ ಹೆಸರು ಸೂಚಿಸಿ

ಸದ್ಯದಲ್ಲಿಯೇ ಕಾರ್ಯಾರಂಭ ಮಾಡಲಿರುವ ಸಂಘದ ವೃದ್ಧಾಶ್ರಮಕ್ಕೆ ''ಜ್ಯೋತಿ'' ಎಂಬ ಹೆಸರನ್ನು ಒಳಗೊಂಡ ಸೂಕ್ತ ಹೆಸರನ್ನು ಸೂಚಿಸಲು ಸದಸ್ಯರನ್ನು ಸಂಘವು ಕೋರುತ್ತದೆ.







# ಕಾರ್ಯದರ್ಶಿ ಕಾಲಂ

ಪ್ರಿಯ ಸಂಕೇತಿ ಬಂಧುಗಳೆ, ಎಲ್ಲರಿಗೂ ನಮಸ್ಕಾರಗಳು.

ಮಳೆ ಇಲ್ಲದೆ ಪವರ್ ಕಟ್ ಅನುಭವಿಸುತ್ತಿದ್ದ ನಮಗೆ, ಶ್ರಾವಣ ಮಾಸ ಒಳ್ಳೆಯ ಮಳೆಯೊಡನೆ ಬಂದಿದೆ. ಮುಂದೆ ಬರಲಿರುವ ಹಬ್ಬಗಳ ಸಾಲಿಗೆ ಸ್ವಾಗತವನ್ನು ಕೋರುತ್ತಾ ಈ ಕಾಲಂ ಬರೆಯುತ್ತಿದ್ದೇನೆ.

ಉಭಯ ಸಂಕೇತಿಗಳು ಒಂದಾಗಬೇಕೆಂಬ ಕೂಗು ಬಹಳ ದಿನಗಳಿಂದಲೂ ಆಗಾಗ್ಗೆ ಅಲ್ಲಲ್ಲಿ ಕೇಳಿಬರುತ್ತಿರುವುದು ನಿಮಗೆಲ್ಲರಿಗೂ ತಿಳಿದೇ ಇದೆ.

ಸಂಕೇತಿ ಸಂಗಮ ಮಾಸ ಪತ್ರಿಕೆ ಈ ಕಾರ್ಯದಲ್ಲಿ ಬಹಳ ಮುಂಚೂಣಿಯಲ್ಲಿದೆ ಎಂದರೆ ತಪ್ಪಾಗಲಾರದು. ಈ ಮಾಸ ಪತ್ರಿಕೆಯ ಹೆಸರೇ ಎಲ್ಲಾ ಸಂಕೇತಿಗಳ ಸಂಗಮವಾಗಬೇಕೆಂದು ಪ್ರತಿಪಾದಿಸುತ್ತದೆ. ಇತ್ತೀಚೆಗೆ ನಡೆದ 'ಸಂಕೇತಿ ಸಂಗಮದ' ದಶಮಾನೋತ್ಸವ ಕಾರ್ಯಕ್ರಮದಲ್ಲಿಯೂ ಈ ವಿಷಯದ ಬಗ್ಗೆ ಒಂದು ಗೋಷ್ಠಿ ಕಾರ್ಯಕ್ರಮವನ್ನು ಏರ್ಪಡಿಸಿದ್ದರು. ಆದರೆ ಈ ಕಾರ್ಯಕ್ರಮಕ್ಕೆ ಕೌಶಿಕ ಸಂಕೇತಿ ಸಂಘದ ಯಾವ ಪ್ರತಿನಿಧಿಯೂ ಬರದಿದ್ದುದರಿಂದ ಇಲ್ಲಿ ಯಾವುದೇ ಒಂದು ಉಲ್ಲೇಖಾರ್ಹ ಬೆಳವಣಿಗೆಯೂ ನಡೆಯಲಿಲ್ಲ. ಹಿರಿಯರಾದ ಪ್ರೊ|| ಅರ್ಕನಾಥರವರು ಭಾಗವಹಿಸುವರೆಂಬ ಆಸೆ ಇದ್ದು, ಅವರೂ ಭಾಗವಹಿಸಲಿಲ್ಲವೆಂಬುದು ಸ್ವಲ್ಪ ನಿರಾಶಾದಾಯಕ.

ಇನ್ನು ಈ ಸಂಗಮದ (ಎಲ್ಲರೂ ಒಂದಾಗುವ ಬಗ್ಗೆ) ಬಗ್ಗೆ ವಿಚಾರ ಮಾಡೋಣ. ಏನಿದು ಒಂದಾಗೋದು ಅಂದ್ರೆ ? ನಾವುಗಳು ಯಾವಾಗ ಬೇರೆ ಆಗಿದ್ದೆವು ? ಏನು ಕಾರಣಗಳು ? ಯಾವ ರೀತಿ ಒಂದಾಗಬೇಕು ಎಂಬ ಪ್ರಶ್ನೆಗಳು ನಮ್ಮಲ್ಲಿ ಬರುವುದು ಸಹಜ.

ಈವರೆಗೆ ನಮಗೆ ತಿಳಿದಿರುವ ಚರಿತ್ರೆಯ ಪ್ರಕಾರ, ನಾವೆಲ್ಲರೂ ಮೂಲತಃ ತಮಿಳುನಾಡಿನ ಶೆಂಕೊಟ್ಟೆ ನಿವಾಸಿಗಳಾಗಿದ್ದು, ಚಾರಿತ್ರಿಕ ಕಾರಣಗಳಿಂದ ನಾವು ಆ ಊರನ್ನು ಬಿಟ್ಟು, ಹಲವಾರು ಗುಂಪುಗಳಲ್ಲಿ ಕರ್ನಾಟಕಕ್ಕೆ ಬಂದು ನೆಲೆಸಿದೆವು. ನಾವು ಬೆಟ್ಟದ ಪುರದಲ್ಲಿ ಮೊದಲು ನೆಲೆಸಿದೆವೆಂಬ ಕಾರಣದಿಂದಲೋ ಏನೊ ನಾವು ಬೆಟ್ಟದಪುರ ಸಂಕೇತಿಗಳಾದೆವು. ಕೌಶಿಕದಲ್ಲಿ ನೆಲೆಯಾದವರು ಕೌಶಿಕ ಸಂಕೇತಿಗಳಾದರು. ಇನ್ನು ಮತ್ತೂರು, ಹೊಸಹಳ್ಳಿ, ಲಿಂಗದಹಳ್ಳಿಯಲ್ಲಿಯೂ

ಸಂಕೇತಿಗಳು ನೆಲೆಸಿದ್ದು ನಮ್ಮ ಮಟ್ಟಿಗೆ ಎಲ್ಲರೂ ಕೌಶಿಕ ಸಂಕೇತಿಗಳೇ ಆಗಿದ್ದರು.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಎಲ್ಲರ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಅದೇನೆಂದರೆ, ನಮ್ಮ ಬೆಟ್ಟದಪುರ ಸಂಕೇತಿಗಳ ಬಹುಪಾಲು ಮನೆದೇವರುಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿಯೇ ಇರುವುದು. ಉದಾಹರಣೆಗೆ, ಯಗಟಿ ಮಲ್ಲಿಕಾರ್ಜುನ, ಮುಗಳೀಕಟ್ಟೆ ಲಕ್ಷ್ಮೀನರಸಿಂಹ, ದೇವನೂರು ಲಕ್ಷ್ಮೀಕಾಂತಸ್ವಾಮಿ, ನೇರಳಿಗೆ ಚೆನ್ನಕೇಶವ ಮುಂತಾದವು. ಇದನ್ನು ಗಮನಿಸಿದರೆ ನಾವು ಮೊದಲಿಗೆ ಇಲ್ಲಿಯೇ ನೆಲೆಸಿ ಕಾರಣಾಂತರಗಳಿಂದ ಮೈಸೂರಿನ ಕಡೆಗೆ ವಲಸೆ ಬಂದೆವು ಎಂಬ ಅನುಮಾನ ಬರುವುದಿಲ್ಲವೆ? ಅಲ್ಲದೆ ಇಲ್ಲಿ ಅರಸೀಕೆರೆಯ ಹತ್ತಿರವೂ ಒಂದು ಬೆಟ್ಟದಪುರ ಇರುವುದು ಕೇವಲ ಕಾಕತಾಳೀಯವಾಗುವುದಿಲ್ಲವಲ್ಲವೆ? ಈ ಮೇಲಿನ ಕಾರಣಗಳಿಂದ ನಾವು ಮತ್ತೂರು, ಹೊಸಹಳ್ಳಿ, ಲಿಂಗದಹಳ್ಳಿಗೆ ಹತ್ತಿರದವರಾಗುತ್ತೇವೆ ಎನಿಸುವುದಿಲ್ಲವೆ ? (ಈಗಷ್ಟೇ ನಾನು ಹೊಸಹಳ್ಳಿಯಲ್ಲಿ ಸಂಕೇತಿ ಸಂಗಮದ ದಶಮಾನೋತ್ಸವದಲ್ಲಿ ಭಾಗವಹಿಸಿ ಬಂದಿರುವುದು ಮತ್ತು ಲಿಂಗದಹಳ್ಳಿಯಲ್ಲಿ ನನ್ನ ಹತ್ತಿರದ ಬಂಧು ಒಬ್ಬರಿರುವುದು ಈ ಅಭಿಪ್ರಾಯಕ್ಕೆ ಕಾರಣವಲ್ಲವೆಂದು ಸ್ಪಷ್ಟಪಡಿಸುತ್ತೇನೆ)

ಹೇಗಾದರೂ ಆಗಲಿ, ಹೀಗೆ ಶೆಂಕೊಟ್ಟೆಯಲ್ಲಿ ಒಂದಾಗಿದ್ದ ನಾವು ಈಗ ಮೂರು ಭಾಗವಾಗಿರುವುದು ದುರದೃಷ್ಟಕರ. ಹೀಗೆ ನೂರಾರು ವರ್ಷಗಳಿಂದ ಒಡೆದು ಹೋಗಿರುವ ನಾವು ಇಂದು ಒಂದಾಗಬೇಕಾಗಿರುವುದು, ಇಂದಿನ ಸಾಮಾಜಿಕ ದೃಷ್ಟಿಯಿಂದ ಅನಿವಾರ್ಯವೆಂದೇ ಹೇಳಬೇಕು.

ಬೆಟ್ಟದಪುರ ಸಂಕೇತಿಗಳಾದ ನಾವು ಸಂಖ್ಯೆಯಲ್ಲಿ ಕೇವಲ ಒಂದು 5-6 ಸಾವಿರದಷ್ಟಿರಬಹುದು. ಈ ಸಂಖ್ಯೆಯನ್ನು ಉಳಿಸಿಕೊಳ್ಳುವುದು ನಮ್ಮ ಸಂಘದ ಇಂದಿನ ಅನಿವಾರ್ಯತೆ. ಮೂಲತಃ ನಮ್ಮ ಸಂಪ್ರದಾಯಗಳಿಗೂ ಇತರ ಸಂಕೇತಿಗಳಿಗೂ ಹೆಚ್ಚು ವ್ಯತ್ಯಾಸಗಳು ಇಲ್ಲವೆಂಬುದು ನನ್ನ ಭಾವನೆ. ಇದ್ದರೂ ಈ ಸಾಂಪ್ರದಾಯಿಕ ವ್ಯತ್ಯಾಸಗಳಲ್ಲಿ, ಋಣಾತ್ಮಕವಾದುದನ್ನು ತ್ಯಜಿಸಿ, ಧನಾತ್ಮಕವಾದವುಗಳನ್ನು ಉಳಿಸಿಕೊಳ್ಳುವತ್ತ ನಾವು ಹೆಜ್ಜೆ ಇಡಬೇಕು. ಅಂದರೆ ಕ್ಷೀಣಿಸುತ್ತಿರುವ ನಮ್ಮ ಸಂಖ್ಯೆ ನಶಿಸಬಾರದು ಎಂಬುದು ನಮ್ಮ ಉದ್ದೇಶವಾದರೆ, ಈಗ ನಡೆಯುತ್ತಿರುವ ಇತರ ಸಮುದಾಯಗಳೊಂದಿಗಿನ ಸಂಬಂಧಗಳನ್ನು ಸಾಧ್ಯವಾದಷ್ಟು ತಡೆದು, ನಮ್ಮವರೇ ಆದ ಅಂದರೆ ಕೌಶಿಕ ಮತ್ತು ಮಲೆನಾಡು ಸಂಕೇತಿಗಳೊಡನೆ ಸಂಬಂಧವನ್ನು ಏರ್ಪಡಿಸುವತ್ತ ನಾವು ಹೆಚ್ಚಿನ ಒಲವನ್ನು ತೋರಿಸಬೇಕು. ಅಂದರೆ ನಾವು ಮೊಟ್ಟಮೊದಲನೆಯದಾಗಿ ಸಾಮಾಜಿಕವಾಗಿ





ಒಂದಾಗಬೇಕು. ಇದಕ್ಕೆ ಎಲ್ಲ ಸಂಕೇತಿಗಳೂ ಪ್ರಯತ್ನಿಸುವರೆ?

ಬಹು ಮುಖ್ಯವಾಗಿ ಇಂದಿನ ಯುವ ಜನಾಂಗ ಇದನ್ನು ಬಹಳ ತೀವ್ರವಾಗಿ ಆಲೋಚಿಸಬೇಕು. ಏನಿದು ? ಕೇವಲ ಸಂಕೇತಿಗಳ ಸಂಬಂಧ ಏರ್ಪಡಿಸಬೇಕು ಎಂಬುದು ಸಂಕುಚಿತ ಭಾವನೆಯಲ್ಲವೆ ? ಎಂಬ ಭಾವನೆ ವಿಚಾರಗಳ ತೀವ್ರತೆಯಲ್ಲಿ ನಮ್ಮ ಯುವಕ, ಯುವತಿಯರಿಗೆ ಬರಬಹುದು. ಆದರೆ, ನಾವು ಎಷ್ಟೇ ತೀವ್ರ ವಿಚಾರವಾದಿಗಳಾದರೂ, ಬೇರೆಯ ಒಂದು ಸಮಾಜದಲ್ಲಿ ನಾವು ಬೆರೆಯಬೇಕಾದಾಗ ನಮ್ಮ ನಡವಳಿಕೆಗಳಲ್ಲಿ ಸಹಜತೆ ಇಲ್ಲದಿರುವುದು ನಿಜ. ನಾವು ತೋಳಗಳ ಮಧ್ಯದ ಕುರಿಯೋ ಅಥವಾ ಗೋವುಗಳ ನಡುವೆ ಬೆಳೆದ ಹುಲಿಮರಿಯೋ ಆಗಿಹೋಗುವುದು ನಿಜ. ನಮ್ಮ ಸಂಸ್ಕೃತಿ, ನಮ್ಮ ಭಾಷೆ ನಮಗೆ ಕೊಡುವ ಆನಂದ, ಆಪ್ಯಾಯಮಾನ ನಮಗೆ ಬೇರೆಲ್ಲಿ ಸಿಗಲು ಸಾಧ್ಯ ? ನಮ್ಮ ಯುವಜನತೆ, ಜತೆಗೆ ಹಿರಿಯರೂ ಸಹ ಈ ಬಗ್ಗೆ ಯೋಚಿಸಲಿ.

ಹೀಗೆ ಸಾಮಾಜಿಕವಾಗಿ ನಾವೆಲ್ಲರೂ ಒಂದಾಗುವಿಕೆ ಅಲ್ಲಲ್ಲಿ ಕೆಲವು ಇದ್ದರೂ ಇದರ ಸಂಖ್ಯೆಯಲ್ಲಿ ಗಮನಾರ್ಹ ಬೆಳವಣಿಗೆ ಆಗಬೇಕು. ಪ್ರತಿ ಬೆಟ್ಟದಪುರ ಸಂಕೇತಿ ಕುಟುಂಬವೂ ಇತರ ಸಂಕೇತಿಗಳೊಡನೆ ಒಂದು ಸಂಬಂಧವನ್ನು ಮಾಡಿರಬೇಕು. ಹೀಗಾದಾಗ ನಾವುಗಳು ಸಾಂಘಿಕವಾಗಿಯೂ ಒಂದಾಗುವ ಕಾಲ ಬರುತ್ತದೆ.

ಇನ್ನೊಂದು ವಿಷಯ. ನಾನು ಆಗಲೇ ಹೇಳಿರುವಂತೆ ನಮ್ಮ ಮನೆದೇವರುಗಳು ಚಿಕ್ಕಮಗಳೂರು ಜಿಲ್ಲೆಯಲ್ಲಿಯೇ ಇರುವುದರಿಂದ ನಾವು ಇಲ್ಲಿನವರಿಗೆ ಹೆಚ್ಚು ಹತ್ತಿರ ಎಂಬುದು ನನ್ನ ಭಾವನೆ. ಹಾಗೂ ಈಗ ನಮ್ಮ ಮೂಲಸ್ಥಳಗಳಾದ ಬೆಟ್ಟದಪುರ, ಸಾಲಿಗ್ರಾಮ, ಹನಸೋಗೆ, ರುದ್ರಪಟ್ಟಣಗಳಲ್ಲಿ ಕೇವಲ ಬೆರಳೆಣಿಕೆಯಷ್ಟು ಸಂಕೇತಿಗಳಿರುವುದು ನಮಗೆಲ್ಲಾ ತಿಳಿದೇ ಇದೆ. ಆದ್ದರಿಂದ ಅತೀ ಹೆಚ್ಚಿನ ಸಂಕೇತಿಗಳಿರುವ ಹೊಸಹಳ್ಳಿ (ಕೇವಲ 4-5 ಕುಟುಂಬಗಳು ಇತರ ಬ್ರಾಹ್ಮಣ ಸಮುದಾಯಕ್ಕೆ ಸೇರಿದವರು) ಮತ್ತು ಮತ್ತೂರುಗಳನ್ನು ಸಧ್ಯದ ಪರಿಸ್ಥಿತಿಯಲ್ಲಿ ನಮ್ಮ ಮೂಲಸ್ಥಾನಗಳೆಂದು ಭಾವಿಸಿ, ಇಲ್ಲಿನ ಸಂಕೇತಿಗಳೊಂದಿಗೆ ಬೆರೆತು ಇಲ್ಲಿನ ಉತ್ಸವಾದಿಗಳಲ್ಲಿ ಭಾಗವಹಿಸಿ ನಮ್ಮ ಸಂಕೇತಿ ಸಂಸ್ಕೃತಿಯನ್ನು ಸಮೃದ್ಧಗೊಳಿಸಬಹುದೆಂಬುದು ನನ್ನ ಅಭಿಪ್ರಾಯ. ದಯವಿಟ್ಟು ಈ ಲೇಖನಕ್ಕೆ ಮತ್ತು ಎಲ್ಲಾ ಸಂಕೇತಿಗಳೂ ಒಂದಾಗಬೇಕೆ ಎಂಬ ವಿಷಯದ ಬಗ್ಗೆ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿ ಬರೆಯಿರಿ.

- ಎಸ್. ಸಿ. ಮಂಜುನಾಥ್

# ಶುಭ ಸಮಾಚಾರಗಳು

## ಚೌಲೋಪನಯನ :

| ತಾರೀಖು | ವಟು |
|---|---|
| 09.07.08<br>ಬೆಂಗಳೂರು | **ಚಿ॥ ರಾ॥ ಪ್ರಮೋದ್**<br>(ಶ್ರೀಮತಿ ಸಾವಿತ್ರಿ ಮತ್ತು ಶ್ರೀ ನಾರಾಯಣ ಮೂರ್ತಿ ಬಿ. ಎ. ಅವರ ಪುತ್ರ ಹಾಗೂ ಶ್ರೀಮತಿ ಅನಸೂಯ ಮತ್ತು ಶ್ರೀ ಅನಂತಕೃಷ್ಣಪ್ಪನವರ ಮೊಮ್ಮಗ) |

## ಉಪನಯನ :

| ತಾರೀಖು | ವಟು |
|---|---|
| 09.07.08<br>ಬೆಂಗಳೂರು | **ಚಿ॥ ರಾ॥ ಆರ್. ಕೆ. ಅಚಿಂತ್ಯ**<br>(ಶ್ರೀಮತಿ ಮಂಜುಳಾ ಮತ್ತು ಶ್ರೀ ಆರ್. ಎಸ್. ಕುಮಾರ್ ಅವರ ಪುತ್ರ ಹಾಗೂ ಶ್ರೀಮತಿ ಮೈತ್ರೇಯಿ ಮತ್ತು ವಿದ್ವಾನ್ ಆರ್. ಕೆ. ಶ್ರೀಕಂಠನ್ ಅವರ ಮೊಮ್ಮಗ) |
| 09.07.08<br>ಬೆಂಗಳೂರು | **ಚಿ॥ ರಾ॥ ಸುಂದರೇಶ್**<br>(ಶ್ರೀಮತಿ ಅನಸೂಯ ಮತ್ತು ಶ್ರೀ ಬಿ.ಎ. ಅನಂತಕೃಷ್ಣಪ್ಪ, ಬೆಟ್ಟದಪುರ ಅವರ ಪುತ್ರ) |
| 09.07.08<br>ಮೈಸೂರು | **ಚಿ॥ ರಾ॥ ಕೆ. ಎಸ್. ಅನಿಲ್**<br>(ಶ್ರೀಮತಿ ಲಕ್ಷ್ಮೀ ಮತ್ತು ಶ್ರೀ ಕೆ. ಆರ್. ಶಂಕರ್ ಅವರ ಪುತ್ರ ಹಾಗೂ ಕಣಗಾಲ್ ಟಿ. ರಾಮಣ್ಣ ಅವರ ಮೊಮ್ಮಗ) |

## ಭೀಮರಥ ಶಾಂತಿ :

| ತಾರೀಖು | |
|---|---|
| 06.07.08<br>ಶ್ರೀರಂಗಪಟ್ಟಣ | **ಶ್ರೀಯುತ ಡಾ॥ ಆರ್.ಚಂದ್ರಶೇಖರ್ ಅವರ 70ನೇ ವರ್ಷದ** ಹುಟ್ಟುಹಬ್ಬವನ್ನು ಅವರ ಮಕ್ಕಳಾದ ಡಾ॥ ರವಿ, ಸೊಸೆ ಡಾ॥ ದರ್ಶನಾ, ಹಾಗೂ ಮಗಳು ಕು॥ ಶೀಲಾ ಅವರುಗಳು ನೆರವೇರಿಸಿದರು. ಶ್ರೀಯುತರು ದಿ॥ ಪರಶು ರಾಮರಾವ್ ಮತ್ತು ದಿ॥ ಕಮಲ ಪಿ. ರಾವ್ ಅವರ ಅಳಿಯಂದಿರು. |





| ತಾರೀಖು | |
|---|---|
| 03.08.08<br>ಬೆಂಗಳೂರು | **ಶ್ರೀಯುತ ಡಾ॥ ಹೆಚ್.ಎಸ್. ಪ್ರಕಾಶ್‌ರವರ 70ನೇ ಹುಟ್ಟುಹಬ್ಬವನ್ನು** ಅವರ ಮಗ ರವಿ ಮತ್ತು ಸೊಸೆ ವಿದ್ಯಾ ಅವರುಗಳು ನೆರವೇರಿಸಿದರು. ಶ್ರೀಯುತರು ದಿ॥ ಹರವೆ ಶ್ರೀನಿವಾಸಯ್ಯನವರ ಪುತ್ರರು. |

## ಜುಲೈ ತಿಂಗಳಲ್ಲಿ ಸಂಘಕ್ಕೆ ಬಂದ ಕೊಡುಗೆಗಳು

### ಆಜೀವ ಸದಸ್ಯತ್ವ (ರೂ. 100/-)

| ಹೆಸರು | ಊರು | ರ. ನಂ. | ಆ.ಸ.ಸಂ. |
|---|---|---|---|
| ಶಾಂಭವಿ ಭರತ್ | ಬೆಂಗಳೂರು | 8837 | 2027 |

### ಸಭಾ ತಾಂಬೂಲಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಎಂ. ಅನಂತನಾರಾಯಣ | ಬೆಂಗಳೂರು | 8827 | 101.00<br>(ಮದುವೆಯ 50ನೇ ವಾರ್ಷಿಕೋತ್ಸವ) |
| ಬಿ. ಎ. ಅನಂತಕೃಷ್ಣಪ್ಪ | ಬೆಟ್ಟದಪುರ | 8834 | 505.00<br>(ಮಗನ ಉಪನಯನ) |
| ಡಾ॥ ಚಂದ್ರಶೇಖರ | ಯುಎಸ್‌ಎ | 8840 | 501.00<br>(70ನೇ ವರ್ಷದ ಹುಟ್ಟುಹಬ್ಬ) |
| ಹೆಚ್. ಎಸ್. ಪ್ರಕಾಶ್ | ಬೆಂಗಳೂರು | 8848 | 501.00<br>(70ನೇ ವರ್ಷದ ಹುಟ್ಟುಹಬ್ಬ) |
| ಕೆ. ವಿಶ್ವನಾಥ | ಬೆಂಗಳೂರು | 8849 | 50.00<br>(ಸತ್ಯನಾರಾಯಣ ಪೂಜೆ) |
| ಆರ್. ಎಸ್. ಶಕುಂತಲಾ | ಬೆಂಗಳೂರು | 8852 | 501.00<br>(ಮೊಮ್ಮಗನ ಉಪನಯನ – 23.06.08) |
| ಹೆಚ್. ಎಸ್. ಲಕ್ಷ್ಮೀಕಾಂತ | ಬೆಂಗಳೂರು | 8853 | 201.00<br>(ಮಗನ ಮದುವೆ) |
| ಬಿ. ಆರ್. ಶ್ರೀನಾಥ್, ಅನ್ನಪೂರ್ಣಮ್ಮ | ಮೈಸೂರು | 8665 | 501.00<br>(ಮೊಮ್ಮಗಳ ಹುಟ್ಟುಹಬ್ಬ – 08.06.2008) |

## ವಾರ್ತಾ ಜಾಹೀರಾತು / ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್‌ಗ್ಯಾನಿಕ್ ಸರ್ವೀಸಸ್ ಅಂಡ್ ಸಲ್ಯೂಷನ್ಸ್ (ಇಂಡಿಯ) ಪ್ರೈ. ಲಿ. | ಬೆಂಗಳೂರು | 8836 | 2000.00 |
| ಬಿ. ಆರ್. ಆನಂದಕುಮಾರ್ | ಬೆಂಗಳೂರು | 8851 | 100.00 |

## ಸಾಲರೂಪದ ವಿದ್ಯಾರ್ಥಿವೇತನದ ಮರುಪಾವತಿ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಪೂಜಾ ಮಹೇಶ್ | ಬೆಂಗಳೂರು | 8843 | 12,000.00 |

## ವೃದ್ಧಾಶ್ರಮ ಫಂಡ್ :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ವಿಜಯಲಕ್ಷ್ಮಿ ಮತ್ತು ಎಸ್.ಎಸ್. ಸದಾಶಿವ | ಬೆಂಗಳೂರು | 8830 | 10,000.00 |
| ಎಂ. ವಿ. ನಾಗರಾಜ | ಮೈಸೂರು | 8844 | 4,000.00 |
| ನಿರ್ಮಲಾ (ಲೇ॥ ಸುಮಿತ್ರಾಬಾಯಿ ಇವರ ಪುತ್ರಿ) | ಬೆಂಗಳೂರು | 8847 | 10,000.00 |

## ಹಾಸ್ಟೆಲ್ ಅನ್ನದಾನ ನಿಧಿಗೆ / ಸೇವೆಗೆ ಬಂದ ಕೊಡುಗೆಗಳು :

| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ಆರ್. ದತ್ತಾತ್ರಿ | ಬೆಂಗಳೂರು | 8831 | 4000.00 (ಮಗಳ ಹುಟ್ಟುಹಬ್ಬ) |
| ಆರ್. ದತ್ತಾತ್ರಿ | ಬೆಂಗಳೂರು | 8832 | 400.00 (ಮಗಳ ಹುಟ್ಟುಹಬ್ಬ) |
| ಬೆಂಗಳೂರು ಸಂಕೇತಿ ಮಹಿಳಾ ಸಮಾಜ | ಬೆಂಗಳೂರು | 8833 | 400.00 |
| ನಿರ್ಮಲಾ (ಲೇ॥ ಸುಮಿತ್ರಾಬಾಯಿ ಇವರ ಪುತ್ರಿ) | ಬೆಂಗಳೂರು | 8845 | 4000.00 (ತಾಯಿಯ ನೆನಪು) |





| ಹೆಸರು | ಊರು | ರ. ನಂ. | ರೂ.ಗಳು |
|---|---|---|---|
| ನಿರ್ಮಲಾ (ಲೇ॥ ಸುಮಿತ್ರಾಬಾಯಿ ಇವರ ಪುತ್ರಿ) | ಬೆಂಗಳೂರು | 8846 | 400.00 (ತಾಯಿಯ ನೆನಪು) |

## ಜುಲೈ ತಿಂಗಳಲ್ಲಿ ನಡೆದ ಹಾಸ್ಟೆಲ್ ಅನ್ನದಾನ ಸೇವಾ :

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 01.07.08 ಬೆಂಗಳೂರು | ವಿಶ್ವನಾಥ ಹೆಚ್. ಎಸ್. | ತಂದೆ ಶ್ರೀಕಂಠಯ್ಯ |
| 01.07.08 ಬಾಂಬೆ | ರಾಧಾ ಆತ್ರೇಯ ನಾಲ್ಕು ದಿನಗಳು | |
| 01.07.08 ಬೆಂಗಳೂರು | ವಿಂಗ್ ಕಮಾಂಡರ್ ಬಿ. ವಿ. ಆರ್. ರಾವ್ | ತಂದೆ ವಾಸುದೇವರಾವ್ |
| 01.07.08 ಯುಎಸ್ಎ | ನಟೇಶ್ ಮಗ್ಗೆ | ತಾಯಿ ಹೊಸಕೋಟೆ ಸೀತಾಲಕ್ಷ್ಮಮ್ಮ |
| 02.07.08 ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಬಿ. ವಾಸುದೇವರಾವ್ (ಮಾತಾಮಹ) |
| 02.07.08 ಬೆಂಗಳೂರು | ವೇಣುಗೋಪಾಲ್ ಆರ್.ಎಸ್. ಮತ್ತು ಸಹೋದರರು | ತಂದೆ ಆರ್.ಡಿ. ಸುಬ್ಬರಾಯಪ್ಪ |
| 02.07.08 ಬೆಂಗಳೂರು | ವೆಂಕಟರಾಮಯ್ಯ ಎಂ.ಎನ್. | ಪತ್ನಿ ಅನಂತಲಕ್ಷ್ಮೀ |
| 03.07.08 ಬಾಂಬೆ | ಕೃಷ್ಣಮೂರ್ತಿ ಆರ್. ವಿ. | ತಂದೆ ವೆಂಕಟರಾಮಯ್ಯ |
| 03.07.08 ಬೆಂಗಳೂರು | ಗೀತಾ ಕೃಪಾ | ಓರಗಿತ್ತಿ ಪಂಕಜ ಹರ್ಷ |
| 03.07.08 ಬೆಂಗಳೂರು | ಚಂದ್ರಹಾಸ ಆರ್.ಕೆ. | ದೊಡ್ಡಮ್ಮ ತೊಟ್ಟಿ ಕಾವೇರಮ್ಮ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 06.07.08<br>ಮೈಸೂರು | ಕೃಷ್ಣಪ್ಪ ಎಸ್. ಆರ್. | ಹಿರಿಯ ಸಹೋದರಿ<br>ಸಾವಿತ್ರಿ |
| 07.07.08<br>ಮೈಸೂರು | ನಾಗಮ್ಮ, ಧ್ರುವ, ಸುಬ್ರಹ್ಮಣ್ಯ<br>ರಾಮನಾಥ್, ನಾಗರಾಜ್, ಶ್ರೀನಿವಾಸ್ | ತಾಯಿ ಜಯಮ್ಮ |
| 08.07.08<br>ಯುಎಸ್‌ಎ | ವೈದೇಹಿ ಮತ್ತು ಶಿವಶಂಕರ್ | ಮಗ ರಾಂ ಶಿವಶಂಕರ್ |
| 08.07.08<br>ಮೈಸೂರು | ಶ್ರೀಕಂಠ ಆರ್. ಸಿ. | ತಂದೆ ಚಂದ್ರಶೇಖರಯ್ಯ |
| 10.07.08<br>ಬೆಂಗಳೂರು | ಶ್ರೀನಿವಾಸಯ್ಯ ಬಿ. ವಿ. ಮತ್ತು<br>ಬಿ. ವಿ. ವಿ. ಸುಬ್ರಹ್ಮಣ್ಯ | ತಾಯಿ ನಾಗಮ್ಮ |
| 10.07.08<br>ಬೆಂಗಳೂರು | ವಿಜಯ ಮತ್ತು<br>ಸಹೋದರಿಯರು | ತಂದೆ ಆರ್. ರಾಜಾರಾವ್ |
| 10.07.08<br>ಬೆಂಗಳೂರು | ಸಾವಿತ್ರಮ್ಮ | ಪತಿ ಹೆಸ್.ಎಸ್.<br>ನಂಜುಂಡಯ್ಯ |
| 11.07.08<br>ಪುಣೆ | ಸರೋಜಮ್ಮ ಕೃಷ್ಣಮೂರ್ತಿ | ತಾಯಿ ಗುಂಡಮ್ಮ<br>ಹನುಮಂತರಾವ್ |
| 12.07.08<br>ಯುಎಸ್‌ಎ | ಜಗನ್ನಾಥ್ ಎಸ್. ಎನ್. | ಪುತ್ರ ಕುಮಾರ್ |
| 12.07.08<br>ಬೆಂಗಳೂರು | ಶಕುಂತಲಾ ವೆಂಕಟಕೃಷ್ಣಪ್ಪ | ಪತಿ ಬಿ. ಎಸ್.ವಿ. ಕೃಷ್ಣಪ್ಪ<br>ನವರ ಹುಟ್ಟುಹಬ್ಬ |
| 13.07.08<br>ಬೆಂಗಳೂರು | ಲಕ್ಷ್ಮೀಕಾಂತ ಆರ್.ಕೆ. ಮತ್ತು<br>ನಂದಕುಮಾರ್ ಆರ್. ಕೆ. | ತಂದೆ ಆರ್. ಎಲ್.<br>ಕೇಶವಯ್ಯ |
| 13.07.08<br>ಮುಂಬಯಿ | ಹೆಚ್.ಎಸ್.ಶಂಕರನಾರಾಯಣ | ತಂದೆ ಹೆಚ್. ಎನ್.<br>ಸುಬ್ರಹ್ಮಣ್ಯ |





| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 14.07.08<br>ಬೆಂಗಳೂರು | ನರಸಿಂಹಮೂರ್ತಿ ಆರ್. ಎನ್. | ಪುಟ್ಟಯ್ಯನ ಶ್ರೀನಿವಾಸ,<br>ಕೇಶವಮೂರ್ತಿ,<br>ದೊರೆಸ್ವಾಮಿ |
| 14.07.08<br>ಬೆಂಗಳೂರು | ವೈದ್ಯನಾಥ ಆರ್. ಜಿ. ಮತ್ತು<br>ಆರ್.ಜಿ.ಕೆ.ಡಿ. ಪ್ರಸಾದ್ | ತಂದೆ ಆರ್. ಎಸ್.<br>ಗುಂಡೂರಾಮಯ್ಯ |
| 14.07.08<br>ಬೆಂಗಳೂರು | ವೈಶಾಲಿ ಮುತ್ತುಕೃಷ್ಣನ್ | ತಾಯಿ ದಾಕ್ಷಾಯಿಣಿ<br>ಮೂರ್ತಿ |
| 14.07.08<br>ಬೆಂಗಳೂರು | ಆರ್.ಕೆ. ರಾಮರಾವ್,<br>ಆರ್. ಕೆ. ಸೂರ್ಯನಾರಾಯಣ | ತಂದೆ ಆರ್.ಎನ್.<br>ಕೃಷ್ಣಪ್ಪ |
| 15.07.08<br>ಬೆಂಗಳೂರು | ನರಸಿಂಹಮೂರ್ತಿ ಆರ್. ಎನ್. | ಬೆಟ್ಟದಪುರ ಓಣಿ<br>ವೆಂಕಟರಾಮಯ್ಯ<br>ನಾಗಮ್ಮ (ಎಂ.ಯು.) |
| 15.07.08<br>ವಾಪಿ (ಗುಜರಾತ್) | ಪ್ರಭಾ ಹೆಚ್. ಎಸ್. | ಪತಿ ಸುಬ್ಬರಾವ್ ಹೆಚ್.ವಿ. |
| 16.07.08<br>ಬೆಂಗಳೂರು | ನರಸಿಂಹಮೂರ್ತಿ ಆರ್. ಎನ್. | ನಾಲೆ ರಾಮಸ್ವಾಮಯ್ಯ,<br>ಜಯಣ್ಣ, ಚಂದ್ರಶೇಖರ್ |
| 16.07.08<br>ಬೆಂಗಳೂರು | ಬೆಂಗಳೂರು ಸಂಕೇತಿ ಮಹಿಳಾ ಸಮಾಜ | |
| 18.07.08<br>ಬೆಂಗಳೂರು | ನರಸಿಂಹಮೂರ್ತಿ ಆರ್. ಎನ್. | ನಾಗರತ್ನ , ಪಾರ್ವತಮ್ಮ,<br>ಲಕ್ಷಮ್ಮ |
| 18.07.08<br>ಯುಎಸ್‌ಎ | ಮೋಹನ್ ಸುಂದರ್ | ತಂದೆ ಆರ್. ಎನ್.<br>ಸುಂದರ್ ರಾಮ್ |

| ತಾರೀಖು | ಹೆಸರು | ಜ್ಞಾಪಕಾರ್ಥ |
|---|---|---|
| 22.07.08 ಬೆಂಗಳೂರು | ಮಾಯಾ ಹೆಚ್. ವಿ. | |
| 24.07.08 ಬೆಂಗಳೂರು | ಶ್ಯಾಮಸುಂದರ್ ಆರ್. ಜೆ. | ತಂದೆ ಆರ್. ಎನ್. ಜನಾರ್ದನ |
| 27.07.08 ಯುಎಸ್ಎ | ಅಶೋಕ್ ರುದ್ರಪಟ್ಟಣ ಮತ್ತು ರೂಪಾ | ಪಿತೃಗಳು ನರಸಿಂಹಯ್ಯ ಮತ್ತು ಪದ್ಮಾವತಿ |
| 29.07.08 ಬೆಂಗಳೂರು | ಶಾಂತಾರಾಂ ಹೆಚ್.ಬಿ. | ತಂದೆ ಶ್ರೀ ಬಿಂದು ಮಾಧವ ಶಾಸ್ತ್ರಿ |
| 31.07.08 ಬೆಂಗಳೂರು | ಆಡಿಟರ್ ಶ್ರೀಕಂಠಯ್ಯ ನವರ ಮಕ್ಕಳು | ತಂದೆ ಎಸ್. ಎ. ಶ್ರೀಕಂಠಯ್ಯನವರ ಹುಟ್ಟುಹಬ್ಬ |
| 31.07.08 ಬೆಂಗಳೂರು | ಜ್ಯೋತಿ ತಿಮ್ಮಪ್ಪಯ್ಯ | ಪಿ.ಎಸ್. ತಿಮ್ಮಪ್ಪಯ್ಯ |
| 31.07.08 ಬೆಂಗಳೂರು | ಮುರಳೀಧರ್ ಆರ್, ಶ್ರೀಧರ್ ಆರ್, ರವಿಕುಮಾರ್ ಆರ್ | ತಾಯಿ ನಾಗರತ್ನಮ್ಮ |
| 31.07.08 ಬೆಂಗಳೂರು | ಚಂದ್ರಶೇಖರ್ ಆರ್, ವೈದೇಹಿ ಮತ್ತು ನಳಿನಿ | ತಾಯಿ ಆರ್. ನಾಗರತ್ನಮ್ಮ |

**ಸಂಪರ್ಕಿಸಿ:**

**ವಧೂ-ವರರ ವಿವರಣೆಗಳಿಗಾಗಿ ನಮ್ಮ ಬಾಂಧವರು ಶ್ರೀಯುತ ಹೆಚ್.ವಿ. ಮುರಳೀಧರ ಅವರನ್ನು ಸಂಪರ್ಕಿಸಬಹುದು.**

**(P. G. Accommodation Available)**

**ದೂ : 9242803829, 9341413319**





## ಬೆಂಗಳೂರು ಶಾಖೆ

ಆರ್.ಎಸ್. ಶ್ರೀನಿವಾಸಯ್ಯ
ಅಧ್ಯಕ್ಷರು

ಬಿ.ಆರ್.ನರಸಿಂಹಮೂರ್ತಿ
ಗೌ|| ಕಾರ್ಯದರ್ಶಿ

## ಗಣಪತಿ ಮಂಗಳಾರತಿ

**ಸೆಪ್ಟಂಬರ್ 27, 2008ನೇ ಶನಿವಾರ ಸಂಜೆ 4.30ಕ್ಕೆ ಸರಿಯಾಗಿ** ಗಣಪತಿ ಮಂಗಳಾರತಿಯ ಪ್ರಯುಕ್ತ ಸಾಂಸ್ಕೃತಿಕ ಕಾರ್ಯಕ್ರಮವು ಆರ್.ವಿ. ರಸ್ತೆಯಲ್ಲಿರುವ ಆರ್.ವಿ. ಟೀಚರ್ಸ್ ಕಾಲೇಜಿನ ಸಭಾಂಗಣದಲ್ಲಿ ನಡೆಯಲಿದೆ. ವೈವಿಧ್ಯಮಯವಾದ ಕಾರ್ಯಕ್ರಮಗಳನ್ನು ತಮ್ಮೆಲ್ಲರನ್ನೂ ರಂಜಿಸಲು ಹಮ್ಮಿಕೊಂಡಿರುತ್ತೇವೆ. ತಾವೆಲ್ಲರೂ ಸಕಾಲಕ್ಕೆ ಬಂಧು-ಮಿತ್ರ ಪರಿವಾರ ಸಮೇತರಾಗಿ ಆಗಮಿಸಿ ಕಾರ್ಯಕ್ರಮವನ್ನು ಅತ್ಯಂತ ಯಶಸ್ವಿಯಾಗಿಸಬೇಕೆಂದು ಪ್ರಾರ್ಥಿಸುತ್ತೇವೆ.

ಕಾರ್ಯಕ್ರಮದ ವಿವರ

## ಈ ವರ್ಷದ ವಿಶೇಷ

**ಸಂಜೆ 4.30ಕ್ಕೆ ಸರಿಯಾಗಿ ತಮಾಷೆ ಆಟಗಳು (ತಮಾಷೆಗಾಗಿ ಮಾತ್ರ ಅಲ್ಲ, ಬಹುಮಾನಕ್ಕಾಗಿ - ವಯೋಮಿತಿಯ ನಿಬಂಧನೆ ಇಲ್ಲ, ಎಲ್ಲರೂ ಭಾಗವಹಿಸಬಹುದು.)**

**ಸಮಯಕ್ಕೆ ಸರಿಯಾಗಿ ಬನ್ನಿರಿ, ಬಹುಮಾನ ಗೆಲ್ಲಿರಿ !!!**

1. ವೇದಘೋಷ 2. ಪ್ರಾರ್ಥನೆ 3. ಸ್ವಾಗತ ಭಾಷಣ
4. ಚಿ|| ಆರ್. ಪಿ. ಪ್ರಶಾಂತ್ ಮತ್ತು ಚಿ|| ಆರ್. ಪಿ. ಪ್ರಮೋದ್ ಅವರಿಂದ ದ್ವಂದ್ವ ವೀಣಾವಾದನ.
5. ನಗೆ ನಾಟಕ - ಸಂಘದ ಸದಸ್ಯರಿಂದ ನಿರ್ದೇಶನ: ಶ್ರೀ ಬಿ. ಎಸ್. ರಾಮಮೂರ್ತಿ 6. ಬಹುಮಾನ ವಿನಿಯೋಗ
7. ಮಂಗಳಾರತಿ 8. ಪ್ರಸಾದ ವಿನಿಯೋಗ 9. ವಿಸರ್ಜನೆ

ವಿ.ಸೂ. : ಎಲ್ಲರೂ ಸರಿಯಾದ ಸಮಯಕ್ಕೆ ಬಂದರೆ, ಅಂದುಕೊಂಡಂತೆಯೇ ಕಾರ್ಯಕ್ರಮಗಳನ್ನು ನಡೆಸಲು ಅನುಕೂಲವಾಗುತ್ತದೆ. ಆದ್ದರಿಂದ ಸರಿಯಾದ ವೇಳೆಗೇ ಎಲ್ಲರೂ ಬರಬೇಕೆಂದು ನಮ್ಮ ಕೋರಿಕೆ.

## ವಧು ಬೇಕಾಗಿದೆ

## ವರನ ವಿವರ

ಗೋತ್ರ : ವಾಧೂಲಸ

ವಯಸ್ಸು : 20.04.1977

ಎತ್ತರ : 5'7''

ವಿದ್ಯಾರ್ಹತೆ : D.E.E., B.E. (Electrical)

ಉದ್ಯೋಗ : Manager - ATLAS COPCO, Peenya

ನಿರೀಕ್ಷೆ : Graduate or Post Graduate, Fair Looking

ಸಂಪರ್ಕಿಸಿ : **26490816, 9986247491**

## ಶ್ರದ್ಧಾಂಜಲಿ

14.07.08 **ಜಿ. ಸರೋಜಮ್ಮ, 71 ವರ್ಷ, ಸಂಕೃತಿ ಗೋತ್ರ**
ಬೆಂಗಳೂರು (ದಿ|| ಮನೋರಮಾ ಮತ್ತು ಸಾಲಿಗ್ರಾಮದ ಶ್ಯಾನುಭೋಗ ದಿ|| ಎಸ್. ಗಂಗಾಧರಯ್ಯನವರ ಪುತ್ರಿ)

18.07.08 **ಆರ್. ವೆಂಕಟರಾಮು, 77 ವರ್ಷ, ವಾಧೂಲಸ ಗೋತ್ರ**
ಬೆಂಗಳೂರು (ದಿ|| ಹೆಚ್. ರಾಮಸ್ವಾಮಯ್ಯನವರ ಪುತ್ರ)

30.07.08 **ಪುಷ್ಪಲತಾ, 65 ವರ್ಷ, ಭಾರದ್ವಾಜ ಗೋತ್ರ**
ಬೆಂಗಳೂರು (ಶ್ರೀ ಎಂ. ಕೆ. ಕೃಷ್ಣಮೂರ್ತಿ ಅವರ ಧರ್ಮಪತ್ನಿ)

01.08.08 **ಎಸ್. ಎನ್. ವಿಜಯ ಕುಮಾರ್, 68 ವರ್ಷ, ಆತ್ರೇಯಸ ಗೋತ್ರ**
ಬೆಂಗಳೂರು (ಸಂಘದ ಮಾಜಿ ಕಾರ್ಯದರ್ಶಿ ದಿ|| ಎಸ್.ಕೆ. ನಾರಾಯಣರಾವ್ ಅವರ ಪುತ್ರ)

ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಅವರ ಕುಟುಂಬ ವರ್ಗದವರಿಗೆ ಈ ದುಃಖವನ್ನು ಭರಿಸಲು ಧೈರ್ಯ, ಸ್ಥೈರ್ಯಗಳನ್ನು ಭಗವಂತನು ಅನುಗ್ರಹಿಸಲಿ ಎಂದು ಪ್ರಾರ್ಥಿಸುತ್ತೇವೆ.





# A Date with Burglars

**By R. G. Subramanyam**

It was in the wee hours of that black Wednesday, 2nd July 2008. when we were fast asleep, that some unknown and uninvited "honoured guests" sneaked into our house stealthily and silently and decamped with some valuable things, which the women folk in general are very possessive and fond of. This sordid episode made an indelible dent on our psyche and shattered our morale. Life is incomplete if man does not get the experience of all types-good, bad. pleasurable, painful etc. The demoralizing experience of 2/7 violently stirred the placid waters of our life and gave a new meaning to life. Is it not too unreasonable to expect that life should always move in the direction that we want it to proceed? It is common knowledge that we are not the arbiters of our lives but are just mute and passive spectators, who simply play or dance to the tunes set by somebody. whom we know not. An unseen hand operates the levers of our lives. We simply do not know what the womb of time has in store for us. We come to this world perhaps to pay the woes of sin of our past lives:

The shocking incident of 2/7 brought to the fore many facets of human nature. There was an overwhelming response from a good number of Samaritans who went an extra mile to render help and lend support to a family, which was then in a mentally shattered state. We sincerely thank all those who stood by us during those distressing moments. A deeply shaken neighbourhood naturally wanted to know how it all happened and asked a number of questions from the point of their own security. There were however many onlookers, bystanders,

and gossipers, whose only interest in the unfortunate episode was to know the modus operandi adopted by the burglars to gain entry into the house and the extent of loss that we suffered. (Would these worthies reimburse the losses that we incurred? If not, why should they have the idle curiosity to delve into matters that we wish to forget as a bad dream?)

The anti-social elements like, the terrorists, burglars, murderers are proving themselves smarter than the law abiding citizens and law enforcing agencies. They adopt newer and newer methods and equipments to carry out their nefarious activities. The burglars who entered into our house cut the window grill noiselessly by using a hand operated tool. Immediately after a terrorist attack the government always says that it would beef up security. We too are now taking steps to bolt the doors of the stable firmly after the horses have run away.

We normally take people for granted; It is only in times such as these that a person's real worth comes to the surface. I never knew that my wife with whom I have spent more than 5 decades has a reservoir of inner strength, mental courage and great presence of mind. She was all alone with the devils in the dead of the night for well over an hour. Still she did not raise any alarm. She resigned herself to the inevitable and played her cards extremely well. Any wrong step on her part would have invited disaster to us. I rediscovered my wife that day.

We were fortunate in having that day in our house "good" burglars. They took away only those things on which they had set their eyes on, without casting their eyes on any other articles that were there for the asking. Except for giving





me a taste of a physical assault, they conducted themselves nonviolently. They did not rob us of our limbs or lives or maim us.

They must have gone away with utter disappointment with the size of the booty, which was highly disproportionate to their labour and incommensurate to the risks they carried. They must have cursed me for having in the house so little of the yellow metal. They must have concluded that I was a man without substance, contrary to the general perception that the designation attached to my name carries They must have deeply regretted for having entered a wrong house.

I call this not burglary but would prefer to call it as redistribution of wealth - a flow from a have to some have-nots.

# The Land Of No Rain

**CAN you imagine a spot on the earth where it never rains? The Atacama Desert in Chile, is said to be the driest spot on earth. The desert is actually quite close to the coast of the Pacific Ocean, but because of its geography, the Andes mountain range prevents rain-bearing clouds from reaching the desert. Some parts of this desert have not seen rain for 500 years.**

**However, even in this dry cold desert, there is some water. You'll find a few salt water lakes, which were created thousands of years ago, when it must have rained heavily here. Sometimes, a moisture laden fog comes from the sea, bringing precious droplets of water, which is enough for the few cacti, lichens and animals which live here.**

## ಗ್ರಂಥ ಪ್ರಕಟಣೆ

ನಮ್ಮ ಬಾಂಧವರಾದ ಶ್ರೀ ಬಿ. ಎನ್. ಶ್ರೀಕಂಠಯ್ಯನವರ ವಿರಚಿತ ಮೂರು ಪುಸ್ತಕಗಳು ಬನಶಂಕರಿ 2ನೇ ಹಂತದಲ್ಲಿರುವ ದೇವಗಿರಿ ಬ್ರಾಹ್ಮಣ ಸಂಘದ ಸೌಜನ್ಯದಿಂದ ಪ್ರಕಟವಾಗಿವೆ.

1. ವಿವಾಹ ದೀಪ್ತಿ (ರೂ. 10/-)
2. ಉಪನಯನ ಪ್ರೋಕ್ತಪದ (ರೂ. 15/-)
3. ಪಾರ್ವಣ ಶ್ರಾದ್ಧ ಕಲ್ಪ (ರೂ. 10/-)

ಈ ಪುಸ್ತಕಗಳ ಮುದ್ರಣ ವೆಚ್ಚವನ್ನು ನಮ್ಮ ಬಾಂಧವರಾದ ಶ್ರೀ ಎಸ್. ಆರ್. ಚಂದ್ರಶೇಖರ್ ಮತ್ತು ಶ್ರೀ ಹೆಚ್. ಎನ್. ಶ್ರೀಹರಿಯವರು ವಹಿಸಿಕೊಂಡಿದ್ದಾರೆ.

ಪ್ರತಿಗಳು ದೊರೆಯುವ ಸ್ಥಳ
ಬಿ. ಎನ್. ಶ್ರೀಕಂಠಯ್ಯ
ನಂ. 103/15, 12ನೇ ಮುಖ್ಯರಸ್ತೆ, ಹನುಮಂತನಗರ,
ಬೆಂಗಳೂರು - 560 050
ದೂರವಾಣಿ : 26605485

## ಬದಲಾದ ವಿಳಾಸಗಳ ಪಟ್ಟಿ ಲಭ್ಯ

15.01.2008 ರವರೆಗೆ ಪರಿಷ್ಕರಿಸಿದ ಬದಲಾದ ವಿಳಾಸ ಪಟ್ಟಿ ಮುದ್ರಿಕೆಯಾಗಿ ಲಭ್ಯವಾಗಿರುತ್ತದೆ. ಇದನ್ನು ಮೈಸೂರು ಕಛೇರಿ ಮತ್ತು ಬೆಂಗಳೂರು ಕಛೇರಿಗಳಲ್ಲಿ ಪಡೆಯಬಹುದು. ಇದರ ಬೆಲೆ ರೂ. 15/- ಮಾತ್ರ. ಇಡೀ ಪುಸ್ತಕದ ಬೆಲೆ ರೂ. 50/- ಮಾತ್ರ.





## ವ್ಯಾಸವಂದನಾ ಕಾರ್ಯಕ್ರಮದ ವರದಿ

ಜ್ಯೋತಿ ಸಾಂಸ್ಕೃತಿಕ ಪ್ರತಿಷ್ಠಾನವು ಸನಾತನ ಆರ್ಯ ವೈದಿಕ ಧರ್ಮದ ಮೂಲಸ್ತಂಭಗಳಾಗಿರುವ ವೇದಗಳ ವಿಭಾಗವನ್ನು ಮಾಡಿ, ಪುರಾಣಗಳು, ಮಹಾಭಾರತ ಹಾಗೂ ಬ್ರಹ್ಮಸೂತ್ರಗಳನ್ನು ರಚಿಸಿದ ಮಹಾಮಹಿಮ ಪುಣ್ಯಶ್ಲೋಕರೆನಿಸಿದ 'ಮಹರ್ಷಿ ವೇದವ್ಯಾಸ'ರ ಲೋಕೋತ್ತರ ಸಾಧನೆ - ಅನುಗ್ರಹಗಳನ್ನು ಸ್ಮರಿಸಲು ''ವ್ಯಾಸವಂದನಾ'' ಕಾರ್ಯಕ್ರಮವನ್ನು ದಿನಾಂಕ 18.07.2008ರ ಶುಕ್ರವಾರದಂದು ಹಮ್ಮಿಕೊಂಡಿತ್ತು.

ಈ ಪವಿತ್ರ ಸಂದರ್ಭದಲ್ಲಿ ಸಂಸ್ಕೃತ ಹಾಗೂ ಕನ್ನಡ ಸಾರಸ್ವತ ಲೋಕಕ್ಕೆ ಅಮಿತ ಸೇವೆಯನ್ನು ಸಲ್ಲಿಸಿದ ಮಹಾಮಹೋಪಾಧ್ಯಾಯ ಎನ್. ರಂಗನಾಥ ಶರ್ಮಾರವರನ್ನು ವ್ಯಾಸರ ಪ್ರತಿನಿಧಿಯೆಂದು ಪರಿಭಾವಿಸಿ ಪ್ರತಿಷ್ಠಾನದ ಅಧ್ಯಕ್ಷರಾದ




ಶ್ರೀ ಬಿ. ಎನ್. ವಿ. ಸುಬ್ರಹ್ಮಣ್ಯರವರು ರೂ. 20,000/- ಗೌರವ ಸಂಭಾವನೆಯೊಂದಿಗೆ ''ವ್ಯಾಸಜ್ಯೋತಿ'' ಪ್ರಶಸ್ತಿಯನ್ನು ನೀಡಿ ಸನ್ಮಾನಿಸಿದರು.

ಉಪನ್ಯಾಸಕರಾಗಿ ಆಗಮಿಸಿದ್ದ ಪೂರ್ಣಪ್ರಜ್ಞ ಸಂಶೋಧನ ಮಂದಿರದ

ನಿರ್ದೇಶಕರಾದ ಡಾ|| ಆನಂದತೀರ್ಥ ನಾಗಸಂಪಿಗೆಯವರು ವ್ಯಾಸರ ಲೋಕಕಾರುಣ್ಯವನ್ನು ಸ್ಮರಿಸುತ್ತಾ - ಮಹರ್ಷಿ ವೇದವ್ಯಾಸರ ಭೂಮಾ ವ್ಯಕ್ತಿತ್ವವನ್ನು ಕೇವಲ ಪದಗಳಿಂದ ಸೆರೆಹಿಡಿಯಲು ಸಾಧ್ಯವಿಲ್ಲ. ವ್ಯಾಸರು ಹಾಲ್ಗಡಲಿನಂತೆ. ಅದರಿಂದ ವೇದಗಳು, ಬ್ರಹ್ಮಸೂತ್ರಗಳೆಂಬ ಅಮೃತವು ಹೊರಹೊಮ್ಮಿತು. ಅವರ ಅಸಾಧಾರಣ ಕಾರ್ಯಶೈಲಿಯೇ ಅವರು ಮಹಾಪುರುಷರೆಂಬುದನ್ನು ಸಿದ್ಧಪಡಿಸುತ್ತದೆ. ಅವರು ರಚಿಸಿದ ಮಹಾಭಾರತವೆಂಬ ಲಕ್ಷಶ್ಲೋಕಾತ್ಮಕ ಗ್ರಂಥವು ಸಾರ್ವಕಾಲಿಕ ಸತ್ಯವನ್ನು ಒಳಗೊಂಡಿದೆ. ಅದರಲ್ಲಿ ಬರುವ ದುರ್ಯೋಧನ, ದುಶ್ಯಾಸನ ಮುಂತಾದ ಪಾತ್ರಗಳು ಇಂದಿಗೂ ಈ ಜಗತ್ತಿನಲ್ಲಿ ವಿಜೃಂಭಿಸುತ್ತಿವೆ. ವ್ಯಾಸರ ಸಾಮರ್ಥ್ಯವನ್ನು ಅರ್ಥಮಾಡಿಕೊಳ್ಳದ ಪಾಶ್ಚಾತ್ಯ ವಿದ್ವಾಂಸರು ಈ ಎಲ್ಲಾ ಗ್ರಂಥಗಳನ್ನು ಒಬ್ಬ ವ್ಯಾಸರು ರಚಿಸಲು ಸಾಧ್ಯವಿಲ್ಲ, ಆನೇಕ ವ್ಯಾಸರು ರಚಿಸಿರಬಹುದೆಂದು ವಾದಿಸುತ್ತಾರೆ. ಆದರೆ ಇದು ಮಹರ್ಷಿ ವ್ಯಾಸರಿಗೆ ಮಾಡುವ ಶುದ್ಧ ಅಪಚಾರವೆಂದು ಹೇಳಿ, ಯುವ ಜನತೆಯು ಪರಂಪರೆಯಿಂದ ನಮ್ಮ ಪೂರ್ವಿಕರು ಕಷ್ಟಪಟ್ಟು ರಕ್ಷಿಸಿಕೊಂಡು ಬಂದ ಸನಾತನ ವೈದಿಕ ಸಂಸ್ಕೃತಿಯನ್ನು ರಕ್ಷಿಸಲು ಮುಂದಾಗಬೇಕು. ನಮ್ಮ ಪೂರ್ವಿಕರ ಆಸ್ತಿ-ಐಶ್ವರ್ಯಗಳಿಗೆ ಆಸೆಪಡುವ ಯುವ ಜನತೆ ಅವರು ರಕ್ಷಿಸಿಕೊಂಡು ಬಂದ ಈ ಸಂಸ್ಕೃತಿಯನ್ನು ರಕ್ಷಿಸಲು ಏಕೆ ಇಚ್ಛಿಸುವುದಿಲ್ಲ? ಎಂದು ಖೇದವನ್ನು ವ್ಯಕ್ತಪಡಿಸಿದರು. ವ್ಯಾಸರ ಕೃತಿಗಳ ಅಧ್ಯಯನ ಮತ್ತು ಅನುಷ್ಠಾನದಿಂದ ನಮ್ಮ ಅಂತರಂಗದ ಸತ್ವವು ವಿಕಸಿಸುವುದು ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಆರಂಭದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದ ವಿದ್ವಾನ್ ಸೋ.ತಿ.ನಾಗರಾಜರು - ಮಹರ್ಷಿ ವ್ಯಾಸರು ಜೀವಿಗಳ ಉದ್ಧಾರಕ್ಕಾಗಿ ನೀಡಿದ ಕೊಡುಗೆ ಅಪಾರ. ಅವರ ಲೋಕ ಕಾರುಣ್ಯವನ್ನು ಬಣ್ಣಿಸಲು ಸಾಧ್ಯವಿಲ್ಲ. ಅಂತಹ ಮಹಾಮಹಿಮರಿಗೆ ಪ್ರತ್ಯುಪಕಾರವಾಗಿ ವಂದನೆಯ ಹೊರತಾಗಿ ಇನ್ನೇನನ್ನೂ ಜನಸಾಮಾನ್ಯರಾದ ನಮ್ಮಿಂದ ಸಲ್ಲಿಸಲು ಸಾಧ್ಯವಿಲ್ಲ. ಈ ಕಾರಣದಿಂದ ಪ್ರತಿಷ್ಠಾನವು ಕಳೆದ ಹಲವಾರು ವರ್ಷಗಳಿಂದ ''ವ್ಯಾಸವಂದನಾ'' ಎಂಬ ವಿಶಿಷ್ಟ ಕಾರ್ಯಕ್ರಮವನ್ನು ಆಚರಿಸುತ್ತಿದೆ ಎಂದು ತಿಳಿಸಿದರು.

ಡಾ|| ವೆಂಕಟರಮಣ ದೇವರು ಭಟ್ಟ





## ಸರ್ ಸಿ. ವಿ. ರಾಮನ್ ಯುವ ವಿಜ್ಞಾನಿ ಪ್ರಶಸ್ತಿ

**2007 - ಭೌತ ವಿಜ್ಞಾನ**



ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿಯು ಡಾ|| ಎಸ್. ಕೃಷ್ಣಪ್ರಸಾದ್ ಅವರ ವಿಶಿಷ್ಟವಾದ ವೈಜ್ಞಾನಿಕ ಸಾಧನೆಗಳನ್ನು ಗುರುತಿಸಿ ಅವರಿಗೆ ಈ ಬಾರಿಯ ಸರ್ ಸಿ. ವಿ. ರಾಮನ್ ಯುವ ವಿಜ್ಞಾನ ಪ್ರಶಸ್ತಿ (ಭೌತ ವಿಜ್ಞಾನ) ಯನ್ನು ನೀಡಿ ಗೌರವಿಸಿದೆ.

ಇವರು ಕಟ್ಟೇಪುರದ ಸುಬ್ಬರಾಯರು ಮತ್ತು ಶಾರದಾರವರ ಪುತ್ರ ಹಾಗೂ ರುದ್ರಪಟ್ಟಣದ ದಿ|| ಆರ್. ವೈ. ಶ್ರೀನಿವಾಸಮೂರ್ತಿ ಮತ್ತು ವಿಮಲಮ್ಮನವರ ಅಳಿಯ.

ಡಾ|| ಕೃಷ್ಣಪ್ರಸಾದ್ ಅವರು 1959ರಲ್ಲಿ ಮೈಸೂರಿನಲ್ಲಿ ಜನಿಸಿದ್ದು, ಭೌತ ವಿಜ್ಞಾನದಲ್ಲಿ ಎಂ.ಎಸ್ಸಿ ಪದವಿಯನ್ನು ಪಡೆದನಂತರ ಲಿಕ್ವಿಡ್ ಕ್ರಿಸ್ಟಲ್ ಕ್ಷೇತ್ರದಲ್ಲಿ ಡಾಕ್ಟೋರಲ್ ಅಧ್ಯಯನಕ್ಕಾಗಿ ಬೆಂಗಳೂರಿನ ರಾಮನ್ ರೀಸರ್ಚ್ ಇನ್‌ಸ್ಟಿಟ್ಯೂಟ್ ಸಂಸ್ಥೆಯ ಪ್ರೊ|| ಎಸ್. ಚಂದ್ರಶೇಖರ್ ಎಫ್.ಆರ್.ಎಸ್. - ವಿಜ್ಞಾನಿ ತಂಡವನ್ನು ಸೇರಿ ತಮ್ಮ ಸಂಶೋಧನೆಗಾಗಿ ಪಿ.ಹೆಚ್.ಡಿ ಪದವಿಯನ್ನು ಪಡೆದಿದ್ದಾರೆ. ಅವರು 1988ರಲ್ಲಿ ಅದೇ ಸಂಸ್ಥೆಯಲ್ಲಿ ನಂತರ 1995ರಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟ ಸೆಂಟರ್ ಫಾರ್ ಲಿಕ್ವಿಟ್ ಕ್ರಿಸ್ಟಲ್ ಸಂಸ್ಥೆಯಲ್ಲಿ ವಿಜ್ಞಾನಿಯಾಗಿ ಸೇವೆ ಸಲ್ಲಿಸಿದ್ದಾರೆ.

ಡಾ|| ಕೃಷ್ಣಪ್ರಸಾದ್ ಅವರು ಪ್ರಮುಖ ನಿಯತ ಕಾಲಿಕೆಗಳಲ್ಲಿ 151 ಸಂಶೋಧನಾ ಲೇಖನಗಳನ್ನು ಪ್ರಕಟಿಸಿರುತ್ತಾರೆ. ಮತ್ತು ಅನೇಕ ವಿಚಾರ ಸಮ್ಮೇಳನಗಳಲ್ಲಿ ಸಂಶೋಧನಾ ಪ್ರಬಂಧಗಳನ್ನು ಮಂಡಿಸಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಹಲವು ವಿದ್ಯಾರ್ಥಿಗಳು ಪಿ.ಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ.

ಇವರಿಗೆ ಸಂಘದ ಅಭಿನಂದನೆಗಳು.

# ಬೇಕಾಗಿದ್ದಾರೆ

ಸದ್ಯದಲ್ಲಿಯೇ ನಿರ್ಮಾಣಗೊಳ್ಳಲಿರುವ ಸಂಘದ ವೃದ್ಧಾಶ್ರಮಕ್ಕೆ ಸೂಕ್ತ ಮೇಲ್ವಿಚಾರಕರು ಹಾಗೂ ಅಡಿಗೆಯವರು ಬೇಕಾಗಿದ್ದಾರೆ. ವೃದ್ಧಾಶ್ರಮದ ಆಶಯದಂತೆ ಸಹನೆ, ಆಸಕ್ತಿ ಅಭಿಮಾನವುಳ್ಳ ವ್ಯಕ್ತಿಗಳಿಗೆ ಸ್ವಾಗತ. ಆಸಕ್ತರು ಸಂಘದ ಪದಾಧಿಕಾರಿಗಳನ್ನು ಲಿಖಿತಮೂಲಕ ಸಂಪರ್ಕಿಸಬೇಕಾಗಿ ಕೋರಲಾಗಿದೆ.

**ಸ್ಥಳ :**

**ನಂ. 172, 'ಬಾಲಾಜಿ ಹೌಸ್ ಬಿಲ್ಡಿಂಗ್ ಕೋ-ಆಪರೇಟೀವ್**
**ಸೊಸೈಟಿ, ವಾಜರಹಳ್ಳಿ, ಕನಕಪುರ ರಸ್ತೆ,**
**ಬೆಂಗಳೂರು ದಕ್ಷಿಣ**

# ಮತ್ತೊಬ್ಬ ಸಂಕೇತಿ ಪುರೋಹಿತರು ಬೆಂಗಳೂರಿನಲ್ಲಿ ಲಭ್ಯ

**ಶುಭ ಸಮಾರಂಭಗಳಿಗೆ ಸಂಪರ್ಕಿಸಿ :**

**ಆರ್. ಕೃಷ್ಣಪ್ರಕಾಶ್**
ಇ/ಮ: ಲೇ|| ಬಿ. ಕೆ. ರಾಮಸ್ವಾಮಿ
ನಂ. 88, ''ಅಕ್ಷಯ ನಿಲಯ'', 5ನೇ ಅಡ್ಡರಸ್ತೆ, 1ನೇ ಮುಖ್ಯರಸ್ತೆ,
ಕಲ್ಯಾಣನಗರ, ಮೂಡಲಪಾಳ್ಯ
ಬೆಂಗಳೂರು - 560 072
ದೂರವಾಣಿ : 9343202502, 9448855209





# ಬೆಂಗಳೂರು ಸಂಕೇತಿ ಮಹಿಳಾ ಸಮಾಜ

ದಿನಾಂಕ 12.07.08ರಂದು ಆದರ್ಶ ವನಿತಾ ಸಮಾಜದಲ್ಲಿ 'ಸರ್ವ ಸದಸ್ಯರ ಸಭೆ' ಏರ್ಪಾಟಾಗಿತ್ತು. ಬೆಳಿಗ್ಗೆ 11 ಗಂಟೆಗೆ ಶ್ರೀಮತಿಯರಾದ ವನಿತಾ ಎಂ. ಮತ್ತು ಸುನೀತಾ ಪಿ. ಅವರ ಪ್ರಾರ್ಥನಾ ಗೀತೆಯೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀಮತಿ ಸಾವಿತ್ರಿ ರಮೇಶ್ ಅವರು ಸಭೆಗೆ ಎಲ್ಲರನ್ನೂ ಸ್ವಾಗತಿಸಿದರು. ನಮ್ಮನ್ನಗಲಿದವರಿಗೆಲ್ಲಾ ಶ್ರದ್ಧಾಂಜಲಿ ಅರ್ಪಿಸಿದನಂತರ ಕಾರ್ಯದರ್ಶಿ ರು. ಕೃ. ಗೀತಾಮಣಿಯವರು ವಾರ್ಷಿಕ ವರದಿಯನ್ನು ಓದುತ್ತಾ ವರ್ಷದಿಂದ ನಡೆದ ಎಲ್ಲಾ ಕಾರ್ಯಕ್ರಮಗಳ ಮೆಲುಕು ಹಾಕಿದರು. ಖಜಾಂಚಿ ಶ್ರೀಮತಿ ಗಾಯಿತ್ರಿಯವರು ವರ್ಷದ ಖರ್ಚು-ವೆಚ್ಚಗಳನ್ನು ಓದಿ, ಸಂಘವು ಆದಾಯದ ಮೆಟ್ಟಿಲಲ್ಲಿದೆ ಎಂದು ತಿಳಿಸಿ, ಎಲ್ಲರಿಂದ ಮೆಚ್ಚುಗೆ ಪಡೆದರು. ಸದಸ್ಯೆಯರಿಗೆ ಅಂದು ಆಡಿಸಬೇಕಿದ್ದ ಒಂದು ಆಟವನ್ನು ಆಡಿಸಲಾಯಿತು. ಪ್ರತೀ ವರ್ಷದಂತೆ ಈ ಬಾರಿಯೂ ಪಬ್ಲಿಕ್ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿರುವ ಸದಸ್ಯೆಯರ ಮಕ್ಕಳು ಮತ್ತು ಮೊಮ್ಮಕ್ಕಳಿಗೆ ''ಪ್ರತಿಭಾ ಪುರಸ್ಕಾರ'' ಮಾಡಲಾಯಿತು. ಈ ಪ್ರತಿಭಾ ಪುರಸ್ಕಾರದ ಸಂಪೂರ್ಣ ಜವಾಬ್ದಾರಿಯನ್ನು ದಿ|| ವಿಜಯ ಕುಮಾರ್‌ರವರು ವಹಿಸಿಕೊಂಡಿದ್ದರು. (ವಿಜಯಕುಮಾರ್‌ರವರು ಅಂದು ಜೀವಂತವಾಗಿದ್ದು ಬಹಳ ಸಂತೋಷದಿಂದ ಪ್ರಾಯೋಜಿಸಿದ್ದರು. ಇಂದು ಇಲ್ಲ ಎಂಬುದು ವಿಷಾದನೀಯ.)

ನಮ್ಮ ವಾಡಿಕೆಯಂತೆ ಇಬ್ಬರು ಮಹಿಳೆಯರಿಗೆ ಮಾಸಾಶನವನ್ನು ಅಂದಿನಿಂದ ಪ್ರಾರಂಭಿಸಿದೆವು. ಈ ಎರಡೂ ಮಾಸಾಶನಗಳನ್ನು ಶ್ರೀಮತಿಯರಾದ ಲೀಲ ಶ್ರೀಕಂಠಯ್ಯ ಮತ್ತು ಲಕ್ಷ್ಮೀಬಾಯಿಯವರುಗಳು ಪ್ರಾಯೋಜಿಸಿದ್ದಾರೆ.

ನಂತರ ಆಟದಲ್ಲಿ (ಹಿಂದಿನ ತಿಂಗಳು ಆಡಿಸಿದ್ದ ಆಟಗಳಲ್ಲಿ ಗೆದ್ದವರೂ ಸೇರಿ) ಗೆದ್ದವರೆಲ್ಲರಿಗೂ ಬಹುಮಾನ ವಿತರಿಸಲಾಯಿತು.

ಎಲ್ಲಾರೀತಿಯಲ್ಲಿಯೂ, ಎಲ್ಲಾ ಕಾರ್ಯಕ್ರಮಗಳಿಗೂ ಸಹಕರಿಸಿದ ಎಲ್ಲರಿಗೂ ಸಂಘವು ವಂದನೆಗಳನ್ನು ತಿಳಿಸಿ, ತನ್ನ ಆತಿಥ್ಯವನ್ನು ಎಲ್ಲರಿಗೂ ನೀಡಿತು.

| ಅಂದಿನ ಆಟದ ವಿಜೇತರು | ಆಟದ ಹೆಸರು - ಹುಟ್ಟುಹಬ್ಬ |
|---|---|
| ಪ್ರಥಮ ಬಹುಮಾನ | ಕೌಸಲ್ಯಾ ಬಾಯಿ |
| ದ್ವಿತೀಯ ಬಹುಮಾನ | ರು. ಕೃ. ಗೀತಾಮಣಿ |
| ತೃತೀಯ ಬಹುಮಾನ (1) | ಉಷಾ ಶ್ರೀನಾಥ್ |
| ತೃತೀಯ ಬಹುಮಾನ (2) | ಚಂದ್ರಿಕಾ |

ರು.ಕೃ.ಗೀತಾಮಣಿ
ದೂ : 26695657 ಗೌ|| ಕಾರ್ಯದರ್ಶಿ

# Scrap the shipping channel project

**By NANDITHA KRISHNA**

THE Sethusamudram Shipping Channel Project (SSCP) seeks to carve a shipping route through the Palk Straits which separates India and Sri Lanka. In doing so, the government is blatantly disregarding three important reasons for not going ahead with the project: the faith and belief of millions of Hindus, for whom Rama's sethu (bridge) is as sacred as the Kaaba for Muslims; the environment, particularly the Gulf of Mannar Biosphere Reserve (GOMBR), whose survival is threatened; and the defence of our southern shores, which will now be thrown open to the whole world.

First and most important is the belief that Rama built the bridge. It does not matter whether Rama did or did not exist. That his followers believe that Rama is divine and constructed the bridge is sufficient reason to halt the destruction of the bridge immediately. Swami Vivekananda, the icon of the present government, wrote of the Sethu that "There Rama's monkeys built a huge bridge, called the Sethu Bandha, connecting India with Ceylon. In very low water even now it is possible to cross from India to Ceylon over the sandbanks there. Now Rama was God incarnate, otherwise, how could he have done all these things?"

Even Sri Lanka, a Buddhist nation, takes care of its Rama sites, such as the cave at the Ravana Ella Falls where Ravana hid Sita to prevent Rama from finding her, and the Sitai Amman Temple at Nuwara Eliya, situated near the Ashokavana where Ravana held her prisoner. They are still visited by devout Tamil pilgrims. The route from Ayodhya to Rameshwaram is dotted with tribes and places with living memories of Rama's visit and





thereby sanctified, from Ayodhya to Dandakaranya in Central India to Nasik on the Godavari; Kishkinda, home of the Vanaras, described by the Jaina Ramayana as a tribe of brave warriors with the monkey flag; Anjanadri, near Hospet, where Hanuman was born; the Sabara (or Saora) tribe of Orissa to which Sabari belonged; and Rameshwaram, named after Rama who made it so sacred that it is second only to Kashi.

The second issue is environmental. The SSCP will ring the death knell of the Gulf of Mannar Biosphere Reserve, which lies to the west of the Sethu. It is a paradise of coral reefs and mangroves and 21 uninhabited islands. Covering an area of 10,500 sq.km. and surrounded by a 10-km buffer zone, it was a famous pearl fishing centre that traded with Rome in the first century A.D. The 'shankha' in Vishnu's hand is found here.

The endangered species in the GOMBR include the dugong or sea cow, protected under CITES, seahorses, five species of marine turtles, ten species of whales and two species of dolphins. The balanoglossus (Pty-chodera flava), a unique species of 'living fossil' that links vertebrates to invertebrates, thrives among the mangroves and sea grasses that surround the islands. Fortyfour species of soft corals are found here. The coral reefs support over 3000 species, besides providing nurseries and breeding grounds for several marine species, including 143 species of crustaceans, 183 species of molluscs, 113 species of echinoderms, gastropods, 109 species of sponges and tiger prawns, besides 704 fish species, 105 species of marine birds, 15 species of marine reptiles and 27 species of reptiles.

Kurusadai island, a part of the GOMBR, has been described as a 'biologist's paradise.' Tamil Nadu has 20 per cent of India's marine fauna, with the greatest diversity in the Gulf of Mannar.

As one actively involved in the efforts to have the Gulf of Mannar declared a Marine National Park in 1986, I find the Ministry of Environment and Forest's clearance of the project shocking, but not so surprising if we remember that the Ministers of both Shipping and Environment belong to the DMK. The project involves both dredging and blasting, which will surely endanger the flora and fauna of the Gulf. The threatened entry of oceanic and alien species into the Gulf and the effect of blasting on the fauna have been ignored. The BJP has suggested a realignment which will be as detrimental to the GOMBR as the present alignment. For the sake of the unique biodiversity of the Gulf of Manner the project must be scrapped.

To imagine that India needs the 30-kilometre, four-hour advantage that the SSCP will provide is ridiculous. Transportation of goods from eastern India to the western coast will still be much cheaper by rail, which transporters prefer. The major ships to use that route will be oil tankers travelling from the Middle East to the Far East. They will leave behind oil slicks that will destroy whatever is left of the Gulf of Mannar Biosphere Reserve.

The third reason to scrap the project is the defence of the southern shores. The existence of the Rama Sethu prevented enemy ships from reaching the southern shores of India. Presently Palk Straits are used by the Sri Lankan Navy to chase LTTE boats. Imagine aircraft carriers and warships floating in the Gulf of Mannar! We are asking for trouble.

The Sethusamudram Project is a disaster in every possible way. Every environmentalist is protesting. Hindus are protesting. And I wonder whether the Navy has considered the defence dangers the channel will open up.

*Courtesy :* Indian Express